


# ದಾಖಲೆಯ ಸೆಲ್ಫಿ!

ಸೆಲ್ಫಿ ಅಂದರೆ ಈಗ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ? ಸ್ಮಾರ್ಟ್‌ಫೋನ್ ಬಂದ ಮೇಲಂತೂ ಸೆಲ್ಫಿ ಫೋಟೊ ತೆಗೆದುಕೊಳ್ಳುವ ಹುಚ್ಚಿಗೆ ಕೊನೆಯೇ ಇಲ್ಲ.. ಕೂತರೂ ಸೆಲ್ಫಿ, ನಿಂತರೂ ಸೆಲ್ಫಿ, ಅಜ್ಜಿ ಜೊತೆಗೆ ಸೆಲ್ಫಿ, ಆಗ ತಾನೆ ಹುಟ್ಟಿದ ಮಗುವಿನ ಜೊತೆಗೂ ಸೆಲ್ಫಿ. ಕಾಲೇಜು ಹುಡುಗಿಯರಿಗಂತೂ ದಿನಕ್ಕೊಂದು ಡಿಸೈನ್‌ನ ಬಟ್ಟೆ ಧರಿಸಿ ಸೆಲ್ಫಿ ತೆಗೆದುಕೊಳ್ಳದಿದ್ದರೆ ನಿದ್ದೆಯೇ ಬರುವುದಿಲ್ಲ. ಇನ್ನು ವಾಟ್ಸಪ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ನಲ್ಲಿ ಹಂಚಿಕೊಂಡರಷ್ಟೇ ಸಮಾಧಾನ! ಒಟ್ಟಾರೆ ಸೆಲ್ಫಿ ತೆಗೆದುಕೊಳ್ಳುವುದಂತೂ ಒಂದೂ ವ್ಯಸನವಾಗಿ ಬಿಟ್ಟಿದೆ. ಸೆಲೆಬ್ರಿಟಿಗಳಂತೂ ಗಂಟೆಗೊಂದು ಸೆಲ್ಫಿ ತೆಗೆದು ಸೋಷಿಯಲ್ ನೆಟ್‌ವರ್ಕ್‌ಗಳಲ್ಲಿ ಅಪ್‌ಲೋಡ್ ಮಾಡುತ್ತಿರುತ್ತಾರೆ.

ಈ ಸೆಲ್ಫಿಯಲ್ಲಿಯೇ ಏನಾದರೊಂದು ಕಸರತ್ತು ಮಾಡಿ ದಾಖಲೆ ಮಾಡುವವರೂ, ಎಡವಟ್ಟು ಮಾಡಿಕೊಳ್ಳುವವರೂ ಇರುತ್ತಾರೆ. ಸಾಮಾನ್ಯವಾಗಿ ಸೆಲ್ಫಿ ಎಂದರೆ ನಮ್ಮ ಆಪ್ತರೊಡನೆ ನಾವೇ ತೆಗೆಸಿಕೊಳ್ಳುವ ಫೋಟೊ, ಅದರಲ್ಲೂ ಹೆಚ್ಚೆಂದರೆ 10 ಜನ ಇರಬಹುದಷ್ಟೇ! ಆದರೆ ಇತ್ತೀಚೆಗೆ ಬಾಂಗ್ಲಾದೇಶದ ಢಾಕಾದಲ್ಲಿ 1,151 ಮಂದಿ ಒಟ್ಟಿಗೆ ನಿಂತು ಸೆಲ್ಫಿ ತೆಗೆಸಿಕೊಂಡು ದಾಖಲೆ ಮಾಡಿದ್ದಾರೆ.

ಮೈಕ್ರೋಸಾಫ್ಟ್ ಲೂಮಿಯ ಬಾಂಗ್ಲಾದೇಶ್ ಎಂಬ ಫೇಸ್‌ಬುಕ್ ಪೇಜ್‌ನಲ್ಲಿ ಪ್ರಕಟವಾದ ಈ ಅತಿ ದೊಡ್ಡ ಸೆಲ್ಫಿ ಚಿತ್ರವನ್ನು ಈವರೆಗೆ ಸುಮಾರು 50,000ಕ್ಕೂ ಅಧಿಕ ಮಂದಿ ಲೈಕ್ ಮಾಡಿದ್ದಾರೆ. ಈ ಸೆಲ್ಫಿ ತೆಗೆಯಲು ಲೂಮಿಯ 730 ಸ್ಮಾರ್ಟ್‌ಫೋನ್ ಬಳಸಿದ್ದಾರೆ. 5 ಮೆಗಾಪಿಕ್ಸೆಲ್‌ನ ವೈಡ್ ಆ್ಯಂಗಲ್ ಸೆಲ್ಫಿ ಕ್ಯಾಮೆರಾದಲ್ಲಿ ತೆಗೆದ ಈ ಚಿತ್ರ ಇದೀಗ ಎಲೆನ್ ಡಿಜೆನರಸ್‌ನ ಆಸ್ಕರ್ ಸೆಲ್ಫಿ ಚಿತ್ರ ಮಾಡಿದ್ದ ದಾಖಲೆಯನ್ನು ಅಳಿಸಿ ಗಿನ್ನೆಸ್ ಸೇರುವ ತವಕದಲ್ಲಿದೆ. ಜೊತೆಗೆ ಈ ಚಿತ್ರವನ್ನು ಮೈಕ್ರೋಸಾಫ್ಟ್ ತನ್ನ ಲೂಮಿಯ ಸ್ಮಾರ್ಟ್‌ಫೋನ್‌ಗಳ ಪ್ರಚಾರಕ್ಕೂ ಬಳಸಲಿದೆ.

ಈ ಚಿತ್ರಕ್ಕೆ ಅಧಿಕೃತವಾಗಿ ಗಿನ್ನೆಸ್ ಮನ್ನಣೆ ಸಿಕ್ಕಿಲ್ಲ, ಆದರೆ ಜನರು ಮಾತ್ರ ಇಷ್ಟೊಂದು ಸಂಖ್ಯೆಯ ಜನರು ಒಂದೆಡೆ ಸೇರಿ ಸೆಲ್ಫಿ ಕ್ಲಿಕ್ಕಿಸಿಕೊಂಡಿರುವುದರಿಂದ ಇದೊಂದು ದಾಖಲೆಯ ಸೆಲ್ಫಿ ಚಿತ್ರವೆಂದೇ ಹೇಳುತ್ತಿದ್ದಾರೆ.

ದಿನಕ್ಕೊಂದು ಸೆಲ್ಫಿ ಅವತಾರಗಳು ಕಾಣಸಿಗುವ ಈ ದಿನಗಳಲ್ಲಿ ಇನ್ನು ಮುಂದೆ ಯಾರ್‍ಯಾರು ಏನೇನು ಸಾಹಸ ಮಾಡಿ ದಾಖಲೆ ಮಾಡಲಿದ್ದಾರೆ ಎಂದು ನೋಡಬೇಕಷ್ಟೇ!

■ ಐ.ಜಿ. ಕರಾಯ

